ಕರ್ನಾಟಕ ವಿಧಾನಸಭೆ

ಸೋಮವಾರ 24ನೇ ಫೆಬ್ರವರಿ 1997ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11-00 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು: (ಶ್ರೀ ರಮೇಶ್‌ಕುಮಾರ್) ರವರು,
ಪೀಠವನ್ನು ಅಲಂಕರಿಸಿದ್ದರು.

1. ಪ್ರಶ್ನೋತ್ತರಗಳು

(ಅ) ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು

1 ಸಂತಾಪ ಸೂಚನೆ

ಅಧ್ಯಕ್ಷರು : ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಎಂ. ಎನ್. ಕಾಮ್‌ತಿಕರ್ ಅವರು ದಿನಾಂಕ 4-12-1996ರಂದು ನಿಧನರಾದುದನ್ನು ಈ ಸದನಕ್ಕೆ ವಿಷಾದದಿಂದ ತಿಳಿಸುತ್ತಿದ್ದೇನೆ. ಎರಡನೇ ವಿಧಾನ ಸಭೆಗೆ ಹುಮ್ನಾಬಾದ್ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 1952 ರಿಂದ 1957ರವರೆಗೆ ಹೈದರಾಬಾದ್ ವಿಧಾನ ಸಭೆಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದರು. ವೃತ್ತಿಯಲ್ಲಿ ವಕೀಲರಾಗಿದ್ದ ಶ್ರೀಯುತರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿ ಸೆರೆಮನೆ ವಾಸ ಅನುಭವಿಸಿದ್ದರು. ಭಾರತ್ ಸೇವಕ್ ಸಮಾಜ ಹಾಗೂ ಭೂದಾನ ಸಮಿತಿಯ ಸಂಚಾಲಕರಾಗಿ ಬೀದರ್ ಜಿಲ್ಲೆಯಲ್ಲಿ ಸೇವೆ ಸಲ್ಲಿಸಿದ್ದರು.

ಮೃತರ ಗೌರವಾರ್ಥ ಮಾನ್ಯ ಸದಸ್ಯರು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೋರುತ್ತೇನೆ.

(ಸದನವು ಎದ್ದು ನಿಂತು ಮೃತರ ಗೌರವಾರ್ಥ ಒಂದು ನಿಮಿಷ ಮೌನವನ್ನಾಚರಿಸಿತು)

ಅಧ್ಯಕ್ಷರು : ಈ ಸಭೆಯು ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯದ ಪ್ರತಿಯನ್ನು ಮೃತರ ಕುಟುಂಬವರ್ಗಕ್ಕೆ ಕಳುಹಿಸಲಾಗುವುದು.

2 ಗಮನ ಸೆಳೆಯುವ ಸೂಚನೆಗಳು

ವಿಷಯ: ಅ) ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟ.

ಶ್ರೀ ಎ. ರಾಮದಾಸ್ (ಕೃಷ್ಣರಾಜ) : ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದಲ್ಲಿ ನಡೆದಿರುವ ಅವ್ಯವಹಾರಗಳಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿ ನಷ್ಟವಾಗಿರುವ ಬಗ್ಗೆ - ಮಾನ್ಯ ಜವಳಿ ಮಂತ್ರಿಗಳ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಂ. ಎಸ್. ಪಾಟೀಲ್ (ಜವಳಿ ಸಚಿವರು) : ಮಾನ್ಯ ಅಧ್ಯಕ್ಷರೇ, ಬ್ಯಾಂಕ್ ಸ್ಟ್ರೀಟ್, ಕರೋಲ್‌ಬಾಗ್, ನವದೆಹಲಿಯಲ್ಲಿ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ತನ್ನ ಮಾರಾಟ ಮಳಿಗೆಯನ್ನು ನಡೆಸಲು ನವೆಂಬರ್, 1986ರಲ್ಲಿ ಮಾಹೆಯಾನ ರೂ. 15,000.00 ಬಾಡಿಗೆ ಆಧಾರದ ಮೇಲೆ ಮೆಃ ಎಸ್. ಎಲ್. ಅಸೊಸಿಯೇಟ್ಸ್ ಪ್ರೈವೇಟ್ ಲಿಮಿಟೆಡ್ ಇವರಿಂದ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡಿತ್ತು. ಆಗ ಮಾಡಿಕೊಂಡ ಕರಾರಿನ ಪ್ರಕಾರ ಬಾಡಿಗೆ ಅವಧಿಯು ಮೂರು (3) ವರ್ಷಗಳಿದ್ದು, ಈ ಅವಧಿ ತೀರಿದ ನಂತರ ಬಾಡಿಗೆ ಕರಾರನ್ನು ಮತ್ತೆ ಮೂರು ವರ್ಷಗಳ ಅವಧಿಗೆ ನವೀಕರಿಸಿಕೊಳ್ಳಲು ಅವಕಾಶವಿತ್ತು. ನವೀಕರಿಸಿದಲ್ಲಿ ಶೇಕಡಾ 10ಕ್ಕೆ ಕಡಿಮೆ ಇಲ್ಲದಂತೆ ಬಾಡಿಗೆಯ ಹೆಚ್ಚಳದೊಂದಿಗೆ ಪರಸ್ಪರ ವಿಚಾರವಿನಿಮಯದೊಂದಿಗೆ ನಿರ್ಧರಿಸಬೇಕಿತ್ತು. ನಿಗಮವೂ ಬಾಡಿಗೆ ಕರಾರನ್ನು ನವೀಕರಿಸಲೂ ಕೋರಿದರೂ, ಕಟ್ಟಡದ ಮಾಲೀಕರು ಒಪ್ಪದೇ ಕಟ್ಟಡವನ್ನು ತೆರವು ಮಾಡಲು ಸೂಚಿಸಿದರು. ಇದಲ್ಲದೆ, ಕಟ್ಟಡದಿಂದ ನಿಗಮವನ್ನು ಹೊರ ಹಾಕಲು ಡಿಸೆಂಬರ್ 1990ರಲ್ಲಿ ದೆಹಲಿ ಉಚ್ಚ